(ಸಾಕ್ಷಿಯನ್ನು ದಿನಾಂಕಃ 20.11.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು. )

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರುಃ ಶ್ರೀ ಸಿ ಬಿ ರವರಿಂದ**

ನನ್ನ ತಂದೆಯವರು ಪ್ರತಿವಾದಪತ್ರವನ್ನು ಸಲ್ಲಿಸಲು ನನಗೆ ಯಾವುದೇ ಮಾಹಿತಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಪತ್ರದಲ್ಲಿ ವಾದಿಯ ಹೆಸರಿಗೆ ಆತಗೂರು ಗ್ರಾಮದಲ್ಲಿದ್ದ ಆಸ್ತಿಯ ಬಗ್ಗೆ ನಮೂದು ಮಾಡಿಲ್ಲ ಎಂದರೆ ಸಾಕ್ಷಿಯು ರೂ.5000/- ಪಡೆದು ಹಕ್ಕು ನಿವೃತ್ತಿ ಪತ್ರ ಬರೆದುಕೊಟ್ಟಿರುವುದಾಗಿ ಎನ್ನುತ್ತಾರೆ. ಸದರಿ ಆಸ್ತಿಯ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಅದರ ವಿಸ್ತೀರ್ಣ 4 ಎಕರೆ ಇರುತ್ತದೆ. ನನ್ನ ತಂದೆ ಎಷ್ಟು ಆಸ್ತಿಯನ್ನು 12 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. 1993-94 ರಲ್ಲಿ ಫಜುಲ್ಲಾ ಖಾನ್, ಇದಾಯತ್ ಉಲ್ಲಾ ಖಾನ್, ನಸೀಮ್ ಉನ್ನಿಸಾ, ಮುಬೀನಾ, ಕಲಿಮಾ, ಸಮಿಮಾ ರವರುಗಳಿಂದ ಹಕ್ಕುನಿವೃತ್ತಿ ಪತ್ರ ಪಡೆದಿರುತ್ತಾರೆ. ಸದರಿ ದಾಖಲೆಯ ಬಗ್ಗೆ ನನ್ನ ತಂದೆ ನನಗೆ ಹೇಳಿರುತ್ತಾರೆ. ಆ ಪತ್ರವನ್ನು ನ್ಯಾಯಾಲಯಕ್ಕೆ ಕೊಟ್ಟಿರುವ ಬಗ್ಗೆ ನನಗೆ ಗೊತ್ತಿಲ್ಲ. ಆ ರೀತಿ ಯಾವುದೇ ಪತ್ರವನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಮೇಲ್ಕಂಡರವರು ಹಕ್ಕುನಿವೃತ್ತಿ ಪತ್ರವನ್ನು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ಆ ಹಕ್ಕು ನಿವೃತ್ತಿ ಪತ್ರವನ್ನು ಕೊಡದೇ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. 1993-94 ರಲ್ಲಿ ಫಜುಲ್ಲಾ ಖಾನ್, ಇದಾಯತ್ ಉಲ್ಲಾ ಖಾನ್ ಬರೆದುಕೊಟ್ಟಿದ್ದರು ಆ ಪತ್ರ ನೋಡಿಲ್ಲ. ಆ ಪತ್ರಕ್ಕೆ ಯಾರ್ಯಾರು ಸಹಿ ಮಾಡಿರುತ್ತಾರೆಂದು ನಾನು ನೋಡಿಲ್ಲ. ಆ ಪತ್ರಕ್ಕೆ ಯಾರ್ಯಾರು ಸಹಿ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ. ಆ ಪತ್ರದ ಬಗ್ಗೆ ನನ್ನ ತಂದೆ ಹೇಳಿದಷ್ಟು ಮಾತ್ರ ಗೊತ್ತಿರುತ್ತದೆ ವೈಯಕ್ತಿಕ ಮಾಹಿತಿ ಇರುವುದಿಲ್ಲ. ನ್ಯಾಯಾಲಯದಲ್ಲಿ ಪತ್ರ ಆಗಿದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ ಹಕ್ಕು ನಿವೃತ್ತಿ ಪತ್ರವನ್ನು ಬರೆದುಕೊಟ್ಟಿರುತ್ತಾರೆ. ಬೇರೆ ಆಸ್ತಿ ಒಟ್ಟು ಕುಟುಂಬದಲ್ಲಿರುತ್ತದೆ. 1993-94 ನೇ ಸಾಲಿನಲ್ಲಿ ದಾವಾ ಆಸ್ತಿ ಬೇರೆಯಾಗಿತ್ತು. ಆ ಬಗ್ಗೆ ದಾಖಲಾತಿಗಳು ಇಲ್ಲ. ಎಲ್ಲಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳಾಗಿತ್ತು ಆದರೂ ಸಹ ದಾವಾ ಆಸ್ತಿಯನ್ನು ನನ್ನ ತಂದೆ 12 ನೇ ಪ್ರತಿವಾದಿಗೆ ಕ್ರಯಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ನಮಗೆ ಗೊತ್ತಿಲ್ಲದಂತೆ ವಾದಿಗಳಿಗೆ ತಿಳಿಯದಂತೆ ಕ್ರಯಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಹಕ್ಕುನಿವೃತ್ತಿ ಪತ್ರ ಬರೆದುಕೊಟ್ಟ ನಂತರ ನನ್ನ ತಂದೆಯ ಹೆಸರಿಗೆ ಖಾತೆಯಾದ ಬಗ್ಗೆ ನನಗೆ ಗೊತ್ತಿಲ್ಲ. ಖಾತೆ ಪತ್ರಗಳನ್ನು ನನ್ನ ತಂದೆಯೇ ಕೊಟ್ಟಿರುತ್ತಾರೆ. ಸದರಿ ಆಸ್ತಿಯ ಮೇಲೆ ಸಾಲವನ್ನು ಕೆನರಾ ಬ್ಯಾಂಕ್ ನಿಂದ ನನ್ನ ತಂದೆ ಪಡೆದಿರುತ್ತಾರೆ. ಪ್ರತಿವಾದಿ-12 ರವರಿಗೆ ಮೋಸದಿಂದ ವಾದಿಗಳಿಗೆ ತಿಳಿಯದಂತೆ ಕ್ರಯಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಿಃ 15-08-2000 ರಲ್ಲಿ ನನ್ನ ತಾತಾ ಪಂಚಾಯಿತಿ ಪಾಲೀ ಪಾರೀಕತ್ ನಂತೆ ವಾದಿಗೆ ಸೇರಬೇಕೆಂದು ಬರೆದಿದ್ದಾರೆ ಅದು ನಿಪಿ-16 ರಂತೆ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ನಾವೆಲ್ಲಾ ಸದರಿ ಆಸ್ತಿಯನ್ನು ವಾದಿಗೆ ಬಿಟ್ಟುಕೊಟ್ಟಿದ್ದೆವು ಎಂದರೆ ಸರಿಯಲ್ಲ. ನಿಪಿ-16 ರ ದಾಖಲೆಯಲ್ಲಿರುವ ಮೊದಲ ಸಹಿ ನನ್ನ ತಂದೆಯದಲ್ಲ.

ಪ್ರತಿವಾದಪತ್ರದಲ್ಲಿರುವ ನನ್ನ ಮತ್ತು ನನ್ನ ತಂದೆಯ ಸಹಿ ಅಲ್ಲ ಎಂದು ನುಡಿಯುತ್ತಾರೆ. 1993-94 ನೇ ಸಾಲಿನಲ್ಲಿ ಯಾವುದೇ ಹಕ್ಕು ನಿವೃತ್ತಿ ಪತ್ರ ಆಗಿಲ್ಲ ಎಂದರೆ ಸರಿಯಲ್ಲ. ಹಕ್ಕುನಿವೃತ್ತಿಪತ್ರ ಬರೆದಾಗ ನಾನು ಹಾಜರಿರಲಿಲ್ಲ, ಯಾರ್ಯಾರಿಗೆ ಹಣ ಕೊಟ್ಟಿರುತ್ತಾರೆಂದು ನನಗೆ ವೈಯಕ್ತಿಕ ಮಾಹಿತಿ ಇಲ್ಲ. ನಿಪಿ-10 ರಲ್ಲಿರುವ ಛಾಯಾಚಿತ್ರ ನನ್ನ ತಂದೆಯದಾಗಿರುತ್ತದೆ ಅದರಲ್ಲಿನ ಹೆಬ್ಬೆಟ್ಟು ಸಹಿ ನನ್ನ ತಂದೆದಲ್ಲ. ನಾನು ಪ್ರತಿವಾದಪತ್ರದಲ್ಲಿ ನನ್ನ ತಂದೆಯ ಸಹಿ ನನ್ನ ತಂದೆಯದಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಪ್ರಸ್ತುತ ಆಸ್ತಿ ಯಾರಾ ಹೆಸರಿನಲ್ಲಿದೆ ಎಂದು ನನಗೆ ಗೊತ್ತಿಲ್ಲ. ದಿಃ 23.12.2002 ರಲ್ಲಿ ಇದಾಯತ್ ಉಲ್ಲಾ ಖಾನ್ ರವರು ಹಕ್ಕುನಿವೃತ್ತಿ ಪತ್ರ ಆಗಿದೆ ಎಂಬ ಬಗ್ಗೆ ದೂರನ್ನು ತಾಲ್ಲೂಕು ಕಚೇರಿಗೆ ಕೊಟ್ಟಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಆ ದೂರಿನಲ್ಲಿರುವ ವಿಚಾರ ನನಗೆ ಗೊತ್ತಿಲ್ಲ. ದಿಃ 28-12-2002 ರಲ್ಲಿ ತಹಶೀಲ್ದಾರವರಿಗೆ ಇದೇ ಆಸ್ತಿಗೆ ಸಂಬಂದಿಸಿದಂತೆ ಮತ್ತೊಂದು ದೂರು ಕೊಟ್ಟಿದ್ದಾರೆಂದರೆ ನನಗೆ ಗೊತ್ತಿಲ್ಲ. ಆ ದಾಖಲೆಯಲ್ಲಿ ಆಸ್ತಿಯ ಖಾತೆ ಮಾಡದಂತೆ ತಡೆಯಿಡಿಯುವಂತೆ ಹೇಳಿದ್ದರು ಎಂದರೆ ನನಗೆ ಗೊತ್ತಿಲ್ಲ. ಆಗಿದ್ದರೂ ಸಹ ಪಂಚಾಯಿತಿ ಪಾಲ್ ಪಾರೀಕತ್ ಮೀರಿ 12 ನೇ ಪ್ರತಿವಾದಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಆಸ್ತಿ ಮಾರಾಟ ಮಾಡಿದ ನಂತರ ಈ ದಾವೆ ಹೂಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮೇಲೆ ನನ್ನ ತಂದೆ ಮತ್ತು 12 ನೇ ಪ್ರತಿವಾದಿಗೆ ಯಾವುದೇ ರೀತಿ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ 12 ನೇ ಪ್ರತಿವಾದಿ, 13 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಮೇಲೆ ನಮಗೆ ಯಾರಿಗೂ ಹಕ್ಕು ಇರಲಿಲ್ಲ, ಅದು ಸಂಪೂರ್ಣವಾಗಿ ಪಂಚಾಯಿತಿ ಪಾಲ್ ಪಾರೀಕತ್ ಮೇರೆಗೆ ವಾದಿಗೆ ಸೇರಬೇಕೆಂದರೆ ಸರಿಯಲ್ಲ. ಆ ವಿಚಾರ ಗೊತ್ತಿದ್ದರೂ ಸಹ ನಾನು ಮತ್ತು ನನ್ನ ತಂದೆ ಸೇರಿ ದಾವಾ ಆಸ್ತಿಯನ್ನು 12 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸ ಇ ಓ.

2 ನೇ ಅಪರ ಸಿವಿಲ್ ನ್ಯಾಯಾಧೀಶರು

ಸಾಕ್ಷಿ ಸಹಿ

ಮತ್ತು ಜೆ ಎಂ ಎಫ್ ಸಿ ಮದ್ದೂರು.